# ನಾಳೆಯಿಂದ ಎನ್‌ಐಟಿಕೆ ಸಾಂಸ್ಕೃತಿಕ ಉತ್ಸವ

**ಮಂಗಳೂರು:** ಸುರತ್ಕಲ್ ಎನ್‌ಐಟಿಕೆ ವಾರ್ಷಿಕ ಸಾಂಸ್ಕೃತಿಕ ಉತ್ಸವ 'ಇನ್ಸಿಡೆಂಟ್ 2023' ಮಾ.16ರಿಂದ 19ರ ತನಕ ಎನ್‌ಐಟಿಕೆಯಲ್ಲಿ ಜರುಗಲಿದೆ. ಫ್ಯಾಶನ್ ಸ್ಪರ್ಧೆ, ಫ್ಯೂಶನ್ ನೈಟ್, ಡಿಜೆ ನೈಟ್, ಸಂಗೀತ, ನೃತ್ಯ, ಸಾಹಿತ್ಯ, ಕ್ರೀಡೆ, ಫ್ಯಾಶನ್, ವ್ಯಾಪಾರ, ಗೇಮಿಂಗ್, ನಾಟಕ ಸಹಿತ 50ಕ್ಕೂ ಅಧಿಕ ಸ್ಪರ್ಧೆ ಏರ್ಪಡಿಸಲಾಗಿದೆ. 200ಕ್ಕೂ ಅಧಿಕ ಕಾಲೇಜುಗಳಿಂದ ಸ್ಪರ್ಧಿಗಳು ಭಾಗವಹಿಸುವರು ಎಂದು ಎನ್‌ಐಟಿಕೆ ವಿದ್ಯಾರ್ಥಿ ಕ್ಷೇಮಪಾಲನಾ ಡೀನ್ ಪ್ರೊ. ನರೇಂದ್ರನಾಥ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 16ರಂದು ಸಂಜೆ 6ಕ್ಕೆ ಉದ್ಘಾಟನಾ ನಡೆಯಲಿದೆ. ನಟ ಪ್ರಕಾಶ್ ಬೆಳವಾಡಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ತುಳಸಿ ಗೌಡ ಭಾಗವಹಿಸುವರು. ಎನ್‌ಐಟಿಕೆ ಸುರತ್ಕಲ್ ಪ್ರಭಾರ ನಿರ್ದೇಶಕ ಪ್ರೊ. ಪ್ರಸಾದ್ ಕೃಷ್ಣ ಅಧ್ಯಕ್ಷತೆ ವಹಿಸುವರು. ಬಳಿಕ ಹಾಸ್ಯ ಕಲಾವಿದೆ ಗುರ್ಲೀನ್ ಪನ್ನು ಅವರಿಂದ ಸ್ಟ್ಯಾಂಡ್‌ಅಪ್ ಕಾಮಿಡಿ ಶೋ ನಡೆಯಲಿದೆ. 17ರಂದು 'ಇನ್ ಟಾಕ್ಸ್' ಕಾರ್ಯಕ್ರಮದಲ್ಲಿ ಬೆಂಗಳೂರಿನ ಮಾಜಿ ಪೊಲೀಸ್ ಕಮಿಷನರ್ ಶಂಕರ್ ಬಿದರಿ, ಅರೆಕಾ ಟೀ ಸಂಸ್ಥಾಪಕ ನಿವೇದನ್ ನೆಂಪೆ ಭಾಷಣ ಮಾಡುವರು ಎಂದರು. ಎನ್‌ಐಟಿಕೆ ಸ್ಟೂಡೆಂಟ್ ಆ್ಯಕ್ಟಿವಿಟಿ ಮತ್ತು ಕ್ರೀಡಾ ಅಧಿಕಾರಿ ಡಾ. ಮನೋಜ್, ಸಾರ್ವಜನಿಕ ಸಂಪರ್ಕ ಅಧಿಕಾರಿ ವೈಷ್ಣವಿ, ಇನ್ಸಿಡೆಂಟ್ ಸಂಚಾಲಕ ಸೂರ್ಯಕೌಶಿಕ್ ಬಿ.ಎನ್. ಸುದ್ದಿಗೋಷ್ಠಿಯಲ್ಲಿದ್ದರು.

Vijaya Karnataka, Date:15/03/23 p,no -05